# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ:ಆ-1:ನೇನೇ:179:2025

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನ ಸೌಧ,
ಡಾ॥ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560 001. ದಿನಾಂಕ:29.09.2026.

## ಅಧಿಕೃತ ಜ್ಞಾಪನ

ವಿಷಯ: ಜೂನಿಯರ್ ಕನ್ಸೋಲ್ ಆಪರೇಟರ್ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವುದರಿಂದ ನೇಮಕಾತಿಯನ್ನು ರದ್ದುಪಡಿಸಿರುವ ಬಗ್ಗೆ.

ಉಲ್ಲೇಖ: 1. ಅಧಿಕೃತ ಜ್ಞಾಪನ ಪತ್ರ ಸಂ:ಕವಿಪ/ಆ-1/ನೇನೆ/179/2025, ದಿ:29.10.2025
2. ಶ್ರೀ ಕಾರ್ತಿಕ್. ಆರ್, ಇವರ ಇ-ಮೇಲ್ ದಿನಾಂಕ:3.11.2025
3. ಶ್ರೀ ಕಾರ್ತಿಕ್. ಆರ್, ಇವರ ಇ-ಮೇಲ್ ದಿ:14.11.2025, ಸ್ವೀ.ದಿ:15.11.2025
4. ಸಚಿವಾಲಯದ ಪತ್ರ ಸಂ:ಕವಿಪ/ಆ-1/ನೇನೆ/179/2025 ದಿ:21.04.2026
5. ಶ್ರೀ ಕಾರ್ತಿಕ್. ಆರ್, ಇವರ ಇ-ಮೇಲ್ ದಿನಾಂಕ:27.04.2026

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಸಚಿವಾಲಯದಲ್ಲಿ ನೇರ ನೇಮಕಾತಿಯ ಮೂಲಕ ಜೂನಿಯರ್ ಕನ್ಸೋಲ್ ಆಪರೇಟರ್ ಹುದ್ದೆಗೆ ಶ್ರೀ ಆರ್. ಕಾರ್ತಿಕ್ ಆದ ನೀವು ಆಯ್ಕೆಗೊಂಡಿದ್ದು, ಈ ಸಂಬಂಧ ಉಲ್ಲೇಖಿತ 01ರ ರೀತ್ಯಾ ದಿನಾಂಕ:29.10.2025ರಂದು ಹೊರಡಿಸಿರುವ ನೇಮಕಾತಿ ಆದೇಶದಲ್ಲಿ ಅಭ್ಯರ್ಥಿಗಳು ಈ ಆದೇಶ ಹೊರಡಿಸಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ಒಂದು ವೇಳೆ ನಿಗಧಿತ ಅವಧಿಯೊಳಗೆ ಈ ನೇಮಕಾತಿ ಆದೇಶದ ಪ್ರಕಾರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ತಪ್ಪಿದ್ದಲ್ಲಿ, ನೇಮಕಾತಿ ಆದೇಶ ತಕ್ಷಣದಿಂದ ಜಾರಿಗೆ ಬರುವಂತೆ ರದ್ದಾಗುತ್ತದೆ ಎಂದು ತಿಳಿಸಲಾಗಿರುತ್ತದೆ.

ಉಲ್ಲೇಖಿತ 02 ಹಾಗೂ 03ರಲ್ಲಿ ನೀವು ಇ-ಮೇಲ್ ಮೂಲಕ ದಿನಾಂಕ:03.11.2025 ಹಾಗೂ 15.11.2025 ರಂದು ಮನವಿ ಪತ್ರ ಸಲ್ಲಿಸಿ ನೀವು ಸರ್ಕಾರಿ ಸೇವೆಯಲ್ಲಿದ್ದು, ಅಲ್ಲಿಂದ ನಿಯಮಾನುಸಾರ ಕರ್ತವ್ಯದಿಂದ ವಿಮುಕ್ತಿ ಹೊಂದಬೇಕಾಗಿರುವುದರಿಂದ ತಮಗೆ ನೀಡಿರುವ 15 ದಿನಗಳ ಕಾಲಾವಕಾಶವನ್ನು ವಿಸ್ತರಿಸಿ, 90 ದಿನಗಳ ಕಾಲಾವಕಾಶವನ್ನು ನೀಡಬೇಕೆಂದು ಕೋರಿದ್ದು, ನೀವು ಕೋರಿರುವ ಅವಧಿಯು ಈಗಾಗಲೇ ಪೂರ್ಣಗೊಂಡು ಹೆಚ್ಚುವರಿ ಅವಧಿಯೂ ಕಳೆದಿದ್ದರೂ (ಒಟ್ಟು ಸುಮಾರು 11(ಹನ್ನೊಂದು) ತಿಂಗಳು) ನೀವು ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಫಲರಾಗಿರುತ್ತೀರಿ.

ಈ ಸಚಿವಾಲಯದಿಂದ ಬರೆದ ಉಲ್ಲೇಖಿತ 04ರ ಪತ್ರದಲ್ಲಿ ನಿಮಗೆ ನೀಡಲಾದ ಕಾಲಾವಕಾಶವು ಈಗಾಗಲೇ ಮುಕ್ತಾಯಗೊಂಡಿರುವುದರಿಂದ, ಈ ಪತ್ರ ತಲುಪಿದ 03 ದಿನಗಳೊಳಗಾಗಿ ನೀವು ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ಇಲ್ಲದಿದ್ದಲ್ಲಿ, ನಿಮ್ಮ ನೇಮಕಾತಿಯನ್ನು ರದ್ದುಗೊಳಿಸಲಾಗುವುದೆಂದು ತಿಳಿಸಲಾಗಿತ್ತು. ಅದಕ್ಕೆ ಪ್ರತ್ಯುತ್ತರವಾಗಿ ನೀವು ದಿನಾಂಕ:27.04.2026ರಂದು ಇಲಾಖಾ ವತಿಯಿಂದ ಕಾಲಾವಕಾಶದ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ನಾನು ಸ್ವೀಕರಿಸಿರುವುದಿಲ್ಲವೆಂದು ಹಾಗೂ ನಾನು ನನ್ನ ಪ್ರಸ್ತುತ ಉದ್ಯೋಗಕ್ಕೆ ರಾಜೀನಾಮೆ ನೀಡಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತೀರಿ.

ಆದರೆ, ದಿನಾಂಕ:29.10.2025 ರಂದು ಹೊರಡಿಸಲಾಗಿರುವ ನಿಮ್ಮ ನೇಮಕಾತಿ ಆದೇಶದ ಷರತ್ತಿನ ಕ್ರಮ ಸಂಖ್ಯೆ: 1 ಮತ್ತು 2 ರಲ್ಲಿ "ಅಭ್ಯರ್ಥಿಗಳು ಆದೇಶ ಹೊರಡಿಸಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ಒಂದು ವೇಳೆ ನಿಗಧಿತ ಅವಧಿಯೊಳಗೆ ಈ ನೇಮಕಾತಿ ಆದೇಶದ ಪ್ರಕಾರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ತಪ್ಪಿದ್ದಲ್ಲಿ, ಸದರಿಯವರ ನೇಮಕಾತಿ ಆದೇಶ ತಕ್ಷಣದಿಂದ ಜಾರಿಗೆ ಬರುವಂತೆ ರದ್ದಾಗುತ್ತದೆ ಎಂದು ತಿಳಿಸುವುದು ಮತ್ತು ಇದಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದ ಇರುವುದಿಲ್ಲವೆಂದು" ತಿಳಿಸಲಾಗಿರುತ್ತದೆ.

ಆದಾಗ್ಯೂ, ನಿಮಗೆ ಈ ಸಚಿವಾಲಯದಿಂದ ಕಾಲಾವಕಾಶಕ್ಕೆ ಸಂಬಂಧಿಸಿದಂತೆ ಶಿಸ್ತು ಮತ್ತು ನೇಮಕಾತಿ ಪ್ರಾಧಿಕಾರವು ಸುಮಾರು 90 ದಿನಗಳ ಕಾಲಾವಕಾಶವಲ್ಲದೆ ಹೆಚ್ಚುವರಿಯಾಗಿ 11 ತಿಂಗಳು ಕಾಲಾವಕಾಶ ನೀಡಿರುತ್ತದೆ. ದಿನಾಂಕ:21.04.2026ರಂದು ಬರೆದ ಪತ್ರದಲ್ಲಿ 03 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಬೇಕೆಂದು ತಿಳಿಸಿದ್ದರೂ ಸಹ ನೀವು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ.

ಆದುದರಿಂದ, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977ರ **ನಿಯಮ 18**(3)ರ ರೀತ್ಯಾ ನಿಮ್ಮ ನೇಮಕಾತಿಯನ್ನು ರದ್ದುಗೊಳಿಸಲಾಗಿದೆ ಎಂದು ಈ ಮೂಲಕ ತಿಳಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

29/9/26

(ಕುಷ್ತರ್ ಉನ್ನೀಸ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ರವರಿಗೆ:

ಶ್ರೀ ಆರ್. ಕಾರ್ತಿಕ್, ಬಿನ್ ಟಿ.ಎಸ್. ರಾಜು, ಮನೆ ನಂ.2336, ನ್ಯೂ ನಂ.07, ಅನುಭವನಗರ, 5ನೇ ಕ್ರಾಸ್, ನಾಗರಭಾವಿ ಮುಖ್ಯರಸ್ತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು-560 072.
Email:karthikrajaacharya@gmail.com

ಪ್ರತಿಗಳು:

01. ಮಾನ್ಯ ಸಭಾಪತಿಯವರ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.,
02. ಮಹಾಲೇಖಪಾಲರು, (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
03. ಕಾರ್ಯದರ್ಶಿ(ಪ್ರ)ರವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.,
04. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ, ಆಡಳಿತ ಶಾಖೆ/ಲೆಕ್ಕಪತ್ರಗಳ ಶಾಖೆ-2, ಕವಿಪ.,
05. ಸೀನಿಯರ್ ಪ್ರೋಗ್ರಾಮರ್, ಗಣಕ ಕೇಂದ್ರ ಶಾಖೆ, ಕವಿಪ.,
06. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮಂ.,
07. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
08. ಕರ್ನಾಟಕ ವಿಧಾನ ಪರಿಷತ್ತಿನ ಎಲ್ಲಾ ಅಧಿಕಾರಿಗಳಿಗೆ,
09. ಸಂಬಂಧಪಟ್ಟ ರಕ್ಷ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.